International Journal of Kannada Research 2022; 8(2): 85-88




International Journal of Kannada Research
www.kannadajournal.com

**ISSN: 2454–5813**
IJKR 2022; 8(2): 85-88
© 2022 IJKR
www.kannadajournal.com
Received: 15-02-2022
Accepted: 21-03-2022

**ಡಾ.ರೂಪ ಎಂ. ಪಿ**
ಕನ್ನಡ ಸಹ ಪ್ರಾಧ್ಯಾಪಕರು.
ಸ.ಪ್ರ.ದ ಮಹಿಳಾ ಕಾಲೇಜು

**Corresponding Author:**
**ಡಾ.ರೂಪ ಎಂ. ಪಿ**
ಕನ್ನಡ ಸಹ ಪ್ರಾಧ್ಯಾಪಕರು.
ಸ.ಪ್ರ.ದ ಮಹಿಳಾ ಕಾಲೇಜು

# ಕುವೆಂಪು ಕಾವ್ಯದಲ್ಲಿ 'ಭಾರತ'ದ ಪ್ರತಿನಿಧೀಕರಣ

**ಡಾ.ರೂಪ ಎಂ. ಪಿ**

**ಪೀಠಿಕೆ:**

'ಪ್ರತೀಯಮಾನಂ ಪುನರಣ್ಯದೇವ
ವಸ್ತ್ವಸ್ತಿ ವಾಣೀಷು ಮಹಾಕವಿನಾಂ'

ಮಹಾಕವಿಗಳ ವಾಣಿಯಲ್ಲಿ ವಾಚ್ಯಾರ್ಥಕ್ಕಿಂತ ಬೇರೆಯಾಗಿಯೇ ಪ್ರತಿಯಮಾನವಾಗುವ ಅರ್ಥವೊಂದು ಇದ್ದೇ ಇರುತ್ತದೆ ಎಂಬ ಆನಂದವರ್ಧನನ ಈ ಮಾತು ಕವಿ ಕುವೆಂಪುವಿಗೆ ಚೆನ್ನಾಗಿ ಒಪ್ಪುತ್ತದೆ. ಕುವೆಂಪುರವರಲ್ಲಿ ಅಪಾರವಾದ ಕವಿಪ್ರತಿಭಾಶಕ್ತಿ ಮೈಗೂಡಿತ್ತು. ತಮ್ಮಲ್ಲಿರುವ ಈ ಕವಿತಾಶಕ್ತಿಯನ್ನು ಚೆನ್ನಾಗಿ ದುಡಿಸಿಕೊಂಡು ದೇಶದ ಮುಖವಾಣಿಯಾಗಿ ನಿಂತವರು ಕುವೆಂಪು. ಕವಿತೆ ಜನಪ್ರಿಯತೆಯನ್ನು ತಂದುಕೊಡುತ್ತದೆನಿಜ ಹಾಗೆಯೇ ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿದೆ ಎಂಬುದನ್ನು ಕುವೆಂಪು ಮರೆತಿರಲಿಲ್ಲ.
ಕವಿಗೆ ಯಾರ ಹಂಗೂ ಇರಬಾರದು. ತಮಗನ್ನಿಸಿದ್ದನ್ನು ಕವಿತೆಯಲ್ಲಿ ಅಭಿವ್ಯಕ್ತಪಡಿಸಲು ಯಾರಿಗೂ ಹೆದರಬೇಕಿಲ್ಲ. ಹಾಗೆಯೇ ಯಾರ ಅಪ್ಪಣೆಯನ್ನು ಕಾಯಬೇಕಿಲ್ಲ. ಕವಿಯು ಸರ್ವ ಸ್ವತಂತ್ರನು. ತಮ್ಮ ಮನದ ಭಾವನೆಗಳನ್ನು ಬಿಚ್ಚಿಡಲು ಯಾವುದರ ಭಯವೂ ಇರಬಾರದು. ಅದರಲ್ಲೂ ದೊರೆಗಳ ಮಧ್ಯಸ್ಥಿಕೆ ಮೊದಲೇ ಇರಬಾರದೆಂದು ಅವರು ಬಯಸುತ್ತಾರೆ.

ಕವಿಗೆ ಅರಸುಗಿರಸುಗಳ ಋಣವಿಲ್ಲ!
ಅವನಗ್ನಿಮುಖಿ
ಪ್ರಲಯಶಿಖಿ!

ಕುವೆಂಪು ಕವಿತೆಗೆ ನಿರ್ದಿಷ್ಟ ವಸ್ತುವೆಂಬುದಿಲ್ಲ. ಎಲ್ಲರಲ್ಲಿಯೂ ಎಲ್ಲದರಲ್ಲಿಯೂ ಹೊಸ ದರ್ಶನವನ್ನು ಕಾಣ್ಕೆ ಯಾಗಿ ನೀಡುವ ಚೈತನ್ಯ ಅವರದು. ಕಲ್ಲು, ಮರ, ಗಿಡ, ಪ್ರಕೃತಿ, ರೈತ, ಬಡವ, ಭಾಷೆ, ದೈವ, ಶಾಸ್ತ್ರ, ವಿಜ್ಞಾನ, ವೈಚಾರಿಕತೆ ಇತ್ಯಾದಿ. ಇದರಲ್ಲಿ ಭಾರತ ಮತ್ತು ಕರ್ನಾಟಕಗಳನ್ನು ಕುರಿತು ತಮ್ಮ ಕಾವ್ಯದ ಮೂಲಕ ನಡೆಸಿರುವ ಅನುಸಂಧಾನ ವಿಶೇಷವಾದುದು. ಇಡೀ ಭರತ ಖಂಡವನ್ನು 'ಮಾತೃ' ಸ್ಥಾನದಲ್ಲಿಟ್ಟು ನೋಡುತ್ತಾರೆ. ತನ್ಮೂಲಕ ಭಾರತೀಯರಲ್ಲಿ ಭಕ್ತಿಭಾವ ನೆಲೆನಿಲ್ಲುವಂತೆ ಮಾಡಿದ್ದು, ಕವಿಯ ವಿಶಿಷ್ಟತೆಯನ್ನು ಸಾರುತ್ತದೆ. 'ಭಾರತ' ಮತ್ತು 'ತಾಯಿ' ನಡುವಣ ಕಲ್ಪನೆಯೇ ರೂಪಕಾತ್ಮಕವಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಆ ದಿನಗಳಲ್ಲಿ ಕುವೆಂಪುರವರ ಕವಿತೆಗಳು ಜನಮಾನಸದಲ್ಲಿ ಅಪಾರವಾದ ದೇಶಭಕ್ತಿಯನ್ನು ತುಂಬಿದುದರಲ್ಲಿ ಸಂಶಯವಿಲ್ಲ. ತಾಯಿ ಬೇರೆಯಲ್ಲ, ದೇಶ ಬೇರೆಯಲ್ಲ ಎಂಬ ಅಭೇದ ಕಲ್ಪನೆಯಿದೆ.

ನನ್ನಮ್ಮ ಜಗದಮ್ಮ
ಜಗದಮ್ಮ ನನ್ನಮ್ಮ
ನನ್ನಮ್ಮನಾಗಿಯೂ ಜಗದಮ್ಮ
ಜಗದಮ್ಮನಾಗಿಯೂ ನನ್ನಮ್ಮ

"ಅಮ್ಮ' ಎಂದು ಹೇಳುವುದರ ಮೂಲಕವೇ, ತಾಯಿ–ಮಕ್ಕಳ ಭಾವನಾತ್ಮಕ ಸಂಬಂಧವನ್ನು ಸಹೃದಯರಲ್ಲಿ ಕಟ್ಟಿಕೊಡುತ್ತಾರೆ. ಹೆತ್ತ ತಾಯಿಯಂತೆ ಅದಕ್ಕೂ ಮಿಗಿಲಾಗಿ ಭಾರತ ಮಾತೆಯನ್ನು ಪ್ರೀತಿಸುವ, ಪೋಷಿಸುವ ಹಾಗೂ ಅನ್ಯರಿಂದ ಅವಳದಾಸ್ಯವನ್ನು ಕಿತ್ತೊಗೆಯಲು ಎಲ್ಲರೂ ಮುಂದಾಗಬೇಕೆಂಬ ಆಶಯ ಇವರ ಕವಿತೆಗಳಲ್ಲಿದೆ.
ಪ್ರಸ್ತುತ ಕುವೆಂಪು ಕವಿತೆಗಳಲ್ಲಿ ಭಾರತದ ಕಲ್ಪನೆಯುಳ್ಳ ಕವಿತೆಗಳನ್ನು ಆಯ್ದುಕೊಂಡು ಅದರಲ್ಲಿ ಮೀಮಾಂಸೆಯ ನೆಲೆಗಳನ್ನು ಗುರುತಿಸಲು ಪ್ರಯತ್ನ ಮಾಡಿದ್ದೇನೆ. ಕುವೆಂಪು ಕವಿತೆಗಳನ್ನು ಅಧ್ಯಯನಕ್ಕೋಸ್ಕರ ಎರಡು ತೆರನಾಗಿ ವಿಂಗಡಿಸಿದ್ದೇನೆ.

೧. ಭಾರತಾಂಬೆಯ ಕುರಿತು ಕವಿಯ ನಿಲುವು
೨. ಭಾರತಾಂಬೆಯ ಮಕ್ಕಳಾಗಿ ನಮ್ಮ ಹೊಣೆ

**(೧) ಭಾರತಾಂಬೆಯ ಕುರಿತು ಕವಿಯ ನಿಲುವು :–**

ಕುವೆಂಪುರವರ ಮೊದಲ ಕವನ ಸಂಕಲನ ಕೊಳಲು(೧೯೩೦). ತಮ್ಮ ಮೊದಲ ಕವನ ಸಂಕಲನದಲ್ಲಿಯೇ ತಾಯ ರೂಪ ಗೋಚರವಾಗಿರುವ ಬಗ್ಗೆ 'ತಾಯಿಯ ಸಾನಿಧ್ಯ' ಕವಿತೆಯಲ್ಲಿ ಹೇಳಿಕೊಂಡಿದ್ದಾರೆ.

ಜಗದ ಸಂತೆಯನಗಲಿ ಗಡಿಬಿಡಿಯನಲ್ಲಿಟ್ಟು
ಅಡವಿಗಳ ಹೃದಯಮಂ ಸೇರಲೀಗ
ಅಂದು ಕೇಳದ ರವಂ ಇಂದು ಕೇಳುವುದೆಮಗೆ
ಅಂದು ಕಾಣದ ರೂಪು ಥಳಿಸುತಿಹುದು!

ತಾಯಿಯೇ ನನ್ನ ಬಳಿ ಬಂದರೂ ನಾನು ಗಮನಿಸಿರಲಿಲ್ಲ. ಈಗ ತಾಯಿಯ ರೂಪ ನನಗೆ, ಸ್ಪಷ್ಟವಾಗಿ ಗೋಚರವಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಕನ್ನಡದ ಇನ್ನಿತರ ಕವಿಗಳಂತೆ ದೇಶವನ್ನು ತಾಯಿಯಾಗಿ ಕಲ್ಪಿಸಿ ಕನ್ನಡದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿದವರು ಕವಿ ಕುವೆಂಪು. ಮುಂದಿನ ಎಲ್ಲಾ ಕವಿತೆಗಳು ಕೂಡ ಭಾರತಾಂಬೆಯಾಗಿಯೇ ಚಿತ್ರಣ ಗೊಂಡಿವೆ.
'ಭಾರತ ಜನನಿಗೆ' ಭರತಮಾತೆಯ ಮೇಲಿರುವ ಅಪಾರ ಪ್ರೀತಿಯನ್ನು ಈ ಕವಿತೆ ವ್ಯಕ್ತಪಡಿಸುತ್ತದೆ. ಭಾರತ ಮಾತೆಯಲ್ಲಿಯೂ ಕುಂದುಕೊರತೆಗಳಿವೆ, ಆದರೂ ಅಂಬೆಯನ್ನೆಂದೂ ತೊರೆಯುವುದಿಲ್ಲ ಎನ್ನುತ್ತಾರೆ.

ಕುಂದುಕೊರತೆಗಳಿಹವು ನಿನ್ನೊಳು ಎಂಬುವಳಲನು ಬಲ್ಲೆನು
ಆದರೊಲಿಯೆನು ಅನ್ಯರ, ಚಿನ್ನವೊಲಿದಿಹ ಧನ್ಯರ
ಕುಂದುಕೊರತೆಗಳಿರಲಿ, ಮಹಿಮಳು ನೀನೆ, ಅನ್ಯರನೊಲ್ಲೆನು

ಭರತ ಮಾತೆಯಲ್ಲಿ ಏನೇ ಕುಂದುಕೊರತೆಗಳಿದ್ದರೂ ಕವಿ ಸಂಪೂರ್ಣವಾಗಿ ತಾಯಿಗೆ ಶರಣಾಗತರಾಗಿದ್ದಾರೆ. ಭಾರತದ ಬಗೆಗಿನ ಅಪಾರ ಪ್ರೀತಿ ಇಲ್ಲಿ ವ್ಯಕ್ತವಾಗಿದೆ. ವೆಂಪುರವರ ಈ ಮನಸ್ಥಿತಿಯೇ ಮುಂದೆ ಕರ್ನಾಟಕವನ್ನು ಭಾರತಾಂಬೆಯ, ತನುಜಾತೆಯಾಗಿ ನೋಡಲು ಸಾಧ್ಯಗೊಳಿಸಿತು. 'ಭಾರತ' ಮತ್ತು 'ಕರ್ನಾಟಕ' ಗಳ ಬಗ್ಗೆ ಕವಿಗಿರುವ ಸ್ಪಷ್ಟ ನಿಲುವುಗಳು ಅವರ ಕವಿತೆಗಳಲ್ಲಿ ವ್ಯಕ್ತವಾಯಿತು.
ಕುವೆಂಪುರವರ ಎರಡನೇ ಕವನ ಸಂಕಲನ 'ಪಾಂಚಜನ್ಯ' ಭಾರತಾಂಬೆಯ ಬಗೆಗೆ ಮಧುರವಾಗಿದ್ದ ಭಾವಗಳು ಬಿರಿದು ಶಂಖಾನಾದವಾಗಿ ಹೊರಹೊಮ್ಮುವುದನ್ನು ಕಾಣುತ್ತೇವೆ.

ನೋಡದೋ ! ಕಾಣೆಯಾ?
ಕಬ್ಬಿಗನ ಲೇಖನಿಯು
ಕಠಾರಿಯಾಗುತ್ತಿರುವುದು!
ಇಂಚರದ ಕೊಳಲು ಬಿರಿದು
ಕಠೋರ ಭೇರಿಯಾಗುತ್ತಿದೆ!

ಇಲ್ಲಿನ ಭಾರತಾಂಬೆ ಕುರಿತ ಕವನಗಳಲ್ಲಿ ಉತ್ಸಾಹ ಮತ್ತು ಕ್ರೋಧ ಭಾವಗಳು ವ್ಯಕ್ತವಾಗಿದೆ. "ಕಾಳಿ ಬರುವಳು' ಕವಿತೆಯಲ್ಲಿ ಇದೇ ಭಾರತಾಂಬೆಯು ರಜೋನ್ಮತ್ತೆಯಾಗಿ ತನ್ನ ಮಕ್ಕಳ ನೋವನ್ನು, ಕಡಿಮೆ ಮಾಡಲು ರಣಚಂಡಿಯ ರೂಪ ತಾಳುತ್ತಾಳೆ, ತಾಯಿ ನಡರೂಪ ಇಲ್ಲಿದೆ.

ವಿಜಯ ರಣೋನ್ಮತ್ತೆಯಾಗಿ
ಬರುವಳಾದಿ ಮಾಯೆಯು
ಮಕ್ಕಳೆದೆಯ ಅಳಲ ನೀಗಿ
ನೋಡು ಬರುತಿಲಿರುವಳದೋ
ರುದ್ರ ಭದ್ರ ಕಾಳಿಯು;
ದೇವಿ ಚಂಡಿ ಚಾಮುಂಡಿ
ರಕ್ತ ರುಂಡಮಾಲಿಯು

ಭಾರತಾಂಬೆಯು ಕಾಳಿಯಾಗಿ ಪರಿವರ್ತನೆ ಹೊಂದಿ ತನ್ನ ಮಕ್ಕಳನ್ನು ಸಲಹುತ್ತಾಳೆ. ತನ್ನ ಕಣ್ಣ ಮುಂದೆಯೇ ತನ್ನ ಮಕ್ಕಳಿಗಾಗುತ್ತಿರುವ ಹಿಂಸೆ ದೌರ್ಜನ್ಯಗಳನ್ನು ಕಂಡು ಸಾತ್ವಿಕ ಮೂರ್ತಿಯಾಗಿದ್ದ 'ತಾಯಿ' ರಣಚಂಡಿಯಾಗಿ ಬದಲಾಗುತ್ತಾಳೆ.
೧೯೩೧ ರಲ್ಲಿ ಪ್ರಕಟವಾದ 'ಭರತ ಮಾತೆಗೆ' ಕವಿತೆಯಲ್ಲಿ ಶತ ಶತಮಾನಗಳಿಂದಲೂ 'ಅನ್ಯ'ರಿಂದ ತಾಯಿ ಮೇಲಾಗುತ್ತಿರುವ ದೌರ್ಜನ್ಯದ ಬಗೆಗೆ ಆಕ್ರೋಶವಿದೆ.

ನಿನ್ನ ಸುಲಿಗೆಯ ಕತೆಯನೋದುತಿರೆ ಕಣ್ಣು
ಹನಿ ತುಂಬಿ ಮಂಜಾಗುವುದು: ದೈನ್ಯದಲ್ಲಿ ನೊಂದು
ನರಳುವುದು ಬಗೆ; ಕುದಿಯುವುದಾ ನೆತ್ತರದೆ ಬೆಂದು
ಬಿಸುಸುಯ್ಯುವುದು:.........

ಭರತ ಮಾತೆಗಾದ ಅನ್ಯಾಯಕ್ಕೆ ನೊಂದ ಮನ 'ಮನ್ನಿಸಮ್ಮಾ : ಸಿಲ್ಕಿ ಮಮತೆಯಲಿ ಒಮ್ಮೊಮ್ಮೆ ಕವಿಯಾಗುವನು ಕಲ್ಕಿ!' ಎಂಬ ಮಾತು ಅತ್ಯಂತ ಧ್ವನಿಪೂರ್ಣವಾಗಿದೆ. ಕ್ರೋಧ ಮತ್ತು ವೀರಭಾವಗಳು ಒಮ್ಮೆಗೆ ವ್ಯಕ್ತವಾಗಿವೆ.
ಇದೇ ಸಂದರ್ಭದಲ್ಲಿ ಬಂದ 'ಭರತಮಾತೆ' (೧೯೩೧), ಕವಿತೆಯು ಭರತಮಾತೆ ಹಲವು ಸಂಕೋಲೆಗಳಿಂದ ಬಂಧಿಯಾಗಿದ್ದರೂ ಅವಳಿಗೆ ಬಿಡುಗಡೆಯಾಗಿದೆ ಎಂಬ ಮಾತು ಕೇಳಿ, ಕೊರಗಿದ ತಾಯ ರೂಪ ಇಲ್ಲಿದೆ.

ಎಂಥ ಮುಕ್ತಿಯೋ? ಇದು
ಎಂಥ ಮುಕ್ತಿಯೋ
ನನ್ನನಾಳ್ವನೊಡ್ಡಿದ ಬಲೆ! ಇದು
ಬರಿ ಕುಯುಕ್ತಿಯೊ!

ನನಗಿನ್ನೂ ಈ ಸಂಕೋಲೆಗಳಿಂದ, 'ಅನ್ಯ' ರಿಂದ ಬಿಡುಗಡೆ ಸಿಕ್ಕಿಲ್ಲವೆಂಬ ಕೊರಗು ವ್ಯಕ್ತವಾಗಿದೆ. ತಾಯಿಯ ಶೋಕವು ಇಲ್ಲಿ ವ್ಯಕ್ತಗೊಂಡಿದೆ.

ಭಾರತ ಮಾತೆಯೇ ತನ್ನ ಮಕ್ಕಳ ದೌರ್ಬಲ್ಯಗಳನ್ನು ನೀಗಿಸಿ ಅವರ ಬಾಳಲ್ಲಿ ಬೆಳಕನ್ನು ತುಂಬಬೇಕೆಂಬ ಆಶಯವು 'ಭಾರತ ತಪಸ್ವಿನಿ' (೧೯೩೨) ಕವಿತೆಯಲ್ಲಿದೆ.

ಭಾರತಾಂಬೆಯು ಜಗದ ಬೆಳಕಾಗುವಳು;
ಹೆಮ್ಮೆ ಗೌರವಗಳಿಂದ ಜನಗಣದ ಕಟನಿರ್ದಯದ
ಲೋಭ ಬುದ್ಧಿಯ ಹೀನ ಕುಟಿಲತೆಯನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ!

ದುಷ್ಟರ ಸಂಹರಿಸಿ, ಭಾರತಾಂಬೆಯೇ ನಮ್ಮೆಲ್ಲರನ್ನು ಸಲಹುವಳು ತನ್ನ ಮಕ್ಕಳ ಸ್ವಾರ್ಥ, ದುರಾಸೆಗಳನ್ನು ನಿಯಂತ್ರಿಸಿ ಜಗಕೆ ಬೆಳಕಾಗುವಳು ಎನ್ನುತ್ತಾರೆ. ಭಾರತ ಪಾಕೃತಿಕ ಸೌಂದರ್ಯದ ಮಡಿಲು. ಭರತಮಾತೆಯು ತನ್ನೊಡಲಲ್ಲಿ ಬೆಟ್ಟ-ಬಯಲು, ನದಿ-ಸಮುದ್ರ ಎಲ್ಲವನ್ನು ನೀಡಿ ಸಲಹುತ್ತಿದ್ದಾಳೆ. ಇವೆಲ್ಲವನ್ನು ದಯಾಪಾಲಿಸಿದ ಅವಳಿಗೆ ಕೈಯೆತ್ತಿ ಮುಗಿಯಬೇಕು, ಗುಡಿಯ ಕಟ್ಟಬೇಕು' ಎನ್ನುತ್ತಾರೆ. ೧೯೩೫ ರಲ್ಲಿ ಪ್ರಕಟವಾದ 'ಭರತ ಭೂಮಿ ನನ್ನ ತಾಯಿ' ಕವಿತೆಯಲ್ಲಿ ಈ ಸಾಲುಗಳಿವೆ.

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಸ್ವಾತಂತ್ರ್ಯ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಿಲು

ಇಂತಹ ತಾಯಿಗಾಗಿ ಯಾವ ತ್ಯಾಗಕ್ಕಾದರೂ ನಾವು ಸಿದ್ದರಾಗಬೇಕು.

ಮತದ ಬಿರುಕುಗಳನು ಮೆರೆವೆ:
ತೊತ್ತ ತೊಡಕುಗಳನ್ನು ಬಿರಿವೆ:
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು

ಕುವೆಂಪುರವರ ನಿಷ್ಟೆ, ಭಾರತ ಪ್ರೇಮ ಎಲ್ಲವೂ ಬೆರಗುಗೊಳಿಸುವಂತಹದ್ದು. ಜಗನ್ಮಾತೆಯ ಕಲ್ಪನೆ ಅತ್ಯಂತ ಗಟ್ಟಿ ಪ್ರತಿಮೆಯಾಗಿ ಅವರನ್ನು ಆವರಿಸಿದುದರಲ್ಲಿ ಅಚ್ಚರಿಯಿಲ್ಲ.

**ಭಾರತಾಂಬೆಯ ಮಕ್ಕಳಾಗಿ ನಮ್ಮ ಹೊಣೆ:**

'ಕೊಳಲು' ಕವನ ಸಂಕಲನದ 'ನಡೆ ಮುಂದೆ' ಕವಿತೆಯು ದೇಶದ ಯುವಕರಲ್ಲಿ ಹೊಸ ಹುಮ್ಮಸ್ಸನ್ನು, ಚೈತನ್ಯವನ್ನು ಹುರಿದುಂಬಿಸುವುದಾಗಿದೆ. ಭಾರತಾಂಬೆಯ ಬಿಡುಗಡೆಗಾಗಿ ಯುವಕರು ಮುನ್ನುಗ್ಗಬೇಕೆಂಬ ಕ್ರಾಂತಿಗೀತೆ ಇದಾಗಿದೆ. 'ಪಾಂಚಜನ್ಯ' ಕವನ ಸಂಕಲನದ ಕೆಲವು ಕವಿತೆಗಳಲ್ಲಿ ಯುವಕರನ್ನು ಭಾರತ ಸಂಗ್ರಾಮಕ್ಕೆ ಸಜ್ಜುಗೊಳಿಸುವ ಕಾರ್ಯವು ಈ ಸಂಕಲನದಲ್ಲಿ ಮತ್ತಷ್ಟು ತೀವ್ರಗೊಳ್ಳುತ್ತದೆ. ಭಾರತಾಂಬೆಯ ಬಿಡುಗಡೆಗಾಗಿ ಎಲ್ಲರೂ ಎಚ್ಚೆತ್ತು ತಾಯಿಗಾಗಿ ತಮ್ಮ ಪ್ರಾಣವನ್ನು ರಣರಂಗದಲ್ಲಿ ಬಲಿನೀಡಬೇಕೆಂದು ಗುಡುಗುತ್ತಾರೆ. ಕೊಳಲಿನ ಗಾನವು ಬಿರಿದು 'ಪಾಂಚಜನ್ಯ'ವಾಗಿ ಪರಿವರ್ತನೆಯಾಗಿದೆ. ''ಪಾಂಚಜನ್ಯ', 'ಕಾಳಿ ಬರುವಳು', 'ಇಂದಿನ ದೇವರು' ಮೊದಲಾದ ಕವಿತೆಗಳು ರೌದ್ರ ಮತ್ತು ವೀರರಸ ಪ್ರಧಾನವಾಗಿವೆ.

ಭರತ ಖಂಡದ ಹಿತವೆ
ನನ್ನ ಹಿತ' ಎಂದು
ಭರತ ಮಾತೆಯ ಮತವೆ
ನನ್ನ ಮತ ಎಂದು
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು
ನುಗ್ಗು ಮುಂದಕೆ, ಧೀರ
ಕಾಳೆಗದ ಕೊಲೆಗೆ
ನುಗ್ಗು ಮರಣಕೆ ವೀರ
ಸಗ್ಗದ ನೆಲೆಗೆ (ಪಾಂಚಜನ್ಯ)

ಭಾರತಾಂಬೆಯೇ ಇಂದು ನಮಗೆಲ್ಲ, ತಾಯಿಯನ್ನು ದಾಸ್ಯದಿಂದ ಬಿಡಿಸಲು ದೇಶದ ಪ್ರತಿಯೊಬ್ಬರೂ ವೀರಧೀರರಾಗಬೇಕು. ಸಾವಿಗಾಗಿ ಹೆದರುವ ಹೇಡಿಗಳಾಗಬಾರದು. ತಮ್ಮ ಜೀವವನ್ನು ಬಲಿಕೊಟ್ಟಾದರರೂ ತಾಯಿ ಮುಕ್ತಿಗಾಗಿ ಶ್ರಮಿಸಬೇಕೆಂಬ ಕರೆಯಿದೆ. ಭಾರತಾಂಬೆಯ ಮುಂದೆ ಎಲ್ಲವೂ ಕ್ಷಣಿಕ. ಎಲ್ಲವೂ ನಶ್ವರ, ಭಾರತಾಂಬೆಯೊಬ್ಬಳೆ ದೇವರು ದೇವತೆ ಎಲ್ಲ ಉಳಿದುವೆಲ್ಲ ಯಕಶ್ಚಿತ

ನೂರು ದೇವರುಗಳನ್ನೆಲ್ಲ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರಾ

ನಮ್ಮ ಕಣ್ಣ ಮುಂದಿರುವ ಭರತ ಭೂಮಿಯನ್ನು ದೇವಿಯೆಂದು ಪರಿಗಣಿಸದೆ ಜಡಮೂರ್ತಿಗಳನ್ನೇ ಆತ್ಯಂತಿಕವೆಂದು ಭಾವಿಸಿ ಮೌಢ್ಯದಲ್ಲಿ ಮುಳುಗಿರುವ ಜನರನ್ನು ಎಚ್ಚರಿಸುತ್ತಾರೆ.

ಭಾರತಿಯೇ ನಮಗಿಂದು ಜೀವನದ ದೇವತೆಯು
ವಿಶ್ವರೂಪಿಯಿವಳು ವಿಶ್ವಮುಖಿಯ್ಮೆ
ನಮ್ಮೆಲ್ಲರಂಗಗಳೆ ನಮ್ಮಥೆಯಂಗವೈ
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯ್ಮೆ (ಇಂದಿನ ದೇವರು)

ಕುವೆಂಪು ತಾವೊಬ್ಬರು ದೇಶಪ್ರೇಮಿಯಾದರೆ ಸಾಕಲ್ಲ, ಇಡೀ ಭಾರತೀಯರ ನರನಾಡಿಯಲ್ಲಿಯೂ ದೇಶಾಭಿಮಾನವೆಂಬುದು ರಕ್ತಗತವಾಗಬೇಕು ಎಂದು ಆಶಿಸುತ್ತಾರೆ.

'ಕೋಗಿಲೆ ಮತ್ತು ಸೋವಿಯತ್ ರಷ್ಯಾ' (೧೯೩೪) ಕವನ ಸಂಕಲನದಲ್ಲಿರುವ 'ರಕ್ತ ತರ್ಪಣ' ಕವಿತೆಯು ದೇಶಕ್ಕಾಗಿ ಹೀಗಾಗಲೇ ರಕ್ತತರ್ಪಣ ಕೊಟ್ಟು ಬಲಿಯಾದ ಹುತಾತ್ಮ ಸಮೂಹ ಇನ್ನೂ ಬಿಡುಗಡೆ ಸಿಗದ ಭಾರತಾಂಬೆಯ ಮುಕ್ತಿಗಾಗಿ ಉಳಿದ ತರುಣ ಸಮೂಹವು ಯುದ್ಧರಂಗದಲ್ಲಿ ತಮ್ಮ ರಕ್ತವನ್ನರಿಸಲು ಸಿದ್ಧರಾಗಬೇಕೆಂದು ಕರೆಕೊಡುತ್ತದೆ.

ಸತ್ತವರ ಕರೆಯು, ಓ ಕೂಗುತಿದೆ ಅದೂ ಕೇಳು
ಭೂತ ಕಾಲದ ಗರ್ಭ ಗೋಧಿಯಿಂದ
ಆಲಿಸಿಯು ಅದನು ನೀ ಸುಮ್ಮನಿರುವೆಯ ಹೇಳು
ದೇಶಮಾತೆಯು ಹಡೆದ ವೀರಕಂದಾ?

ಭಾರತಾಂಬೆಯ ಮುಕ್ತಿಗಾಗಿ ತರುಣರು ವೀರರಾಗಿ, ಧೀರರಾಗಿ ಮುನ್ನುಗ್ಗಬೇಕು. ನಮ್ಮ ಬಲಿದಾನದಿಂದ ತಾಯ ಬಿಡುಗಡೆ ಸಾಧ್ಯ. 'ಸುಮೂಹೂರ್ತವು ಇಂದೆ! ಎಂಬ ಕವಿತೆಯಲ್ಲಿ ಈ ಆರ್ಭಟವೂ ಮತ್ತಷ್ಟು ತೀವ್ರತೆಯನ್ನು ಪಡೆದುಕೊಂಡಿದೆ. ತಾಯಿ 'ಅನ್ಯ' ರ ಹಂಗಿನಲ್ಲಿ ದಾಸಿಯಾಗಿರುವಾಗ ಅದನ್ನು

ನೋಡಿಕೊಂಡು ಕೂರುವುದು ವೀರರ ಲಕ್ಷಣವಲ್ಲ. ದಾಸ್ಯದಿಂದ ಬಿಡುಗಡೆಗೊಳಿಸಲು ಸುಮೂಹೂರ್ತವು ಇಂದೆ ಎನ್ನುತ್ತಾರೆ. ತಾಯಿಯನ್ನು

ಬೀಳಲಿ ನೆತ್ತರು ಕಾರಿ
ಹೋದರೆ ಹೋಗಲಿ ತಲೆ ಹಾರಿ
ತಾಯ್ನಾಡಿನ ಮೇಲ್ಮೆಗೆ ಹೋರಿ:
ಸ್ವಾತಂತ್ರ್ಯದ ಸ್ವರ್ಗಕೆ ಏರಿ! (೧೯೩೫)

ಪ್ರತಿ ಭಾರತೀಯನ ಕಣ ಕಣದಲ್ಲೂ ದೇಶಭಕ್ತಿಯನ್ನು ತುಂಬಿದ ಕವಿ ದೇಶ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದರು. ದೇಶದ ಬಿಡುಗಡೆಯವರೆಗೂ ಎಲ್ಲಾ ಪ್ರಮುಖ ಘಟ್ಟಗಳಲ್ಲಿಯೂ ಭಾವಾವೇಶವನ್ನು ತುಂಬ ಕವಿತೆ ರಚಿಸಿದರು. ೧೯೪೭ ರಲ್ಲಿ ದೇಶ ಸ್ವತಂತ್ರಗೊಂಡಾಗ ಅಂದೇ 'ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥ' ಎಂಬ ಕವಿತೆಯಲ್ಲಿ ಮೇರೆ ಮೀರಿದ ತಮ್ಮ ಉತ್ಸಾಹ ಆನಂದಗಳನ್ನು ಬಹು ಧೀರ್ಘವಾಗಿ ಹೇಳಿಕೊಂಡಿದ್ದಾರೆ.

ನನಸಾದುದೂ ಶತಮಾನದ
ಶತ ಶತಮಾನದ
ಸ್ವಾತಂತ್ರ್ಯದ ಸಂಗ್ರಾಮದಿ
ಗತಿಸಿದಮಿತ ಹುತಾತ್ಮರ
ಬಲಿದಾನಂ ಫಲಿಸಿತೊ ಇಂದು!
ಓ ಎಳೆಯರೆ, ಓ ಮುದಿಯರೆ,
ಓ ಗೆಳೆಯರೆ ಐತನ್ನಿ :
ಹೊಸ ಬಾಳಿಗೆ ಹೊಸ ನೋಂಪಿಯ
ಹೊಸ ಕಂಕಣವನ್ನು ತನ್ನಿ

ಎಂದು ತಮ್ಮ ಆನಂದವನ್ನು ಹೊರ ಹೊಮ್ಮಿಸಿದ ಕವಿಯ ಈ ಗೆಲುವು ಇಲ್ಲಿಗೆ ನಿಲ್ಲುವುದಿಲ್ಲ. ಮುಂದೆಯೂ ಅವರು ಭಾರತದಲ್ಲಿನ ಐತಿಹಾಸಿಕ ಘಟನೆಗಳಿಗೆ ತಮ್ಮ ಕವಿತೆಗಳ ಮೂಲಕವೇ ಸ್ಪಂದನವನ್ನು ನೀಡಿದ ಮಹಾಚೇತನ. ಕವಿಯೊಬ್ಬ ಜಗದ ಕವಿಯಾಗಿ, ಯುಗದ ಕವಿಯಾಗಿ, ಮಹಾಕವಿಯಾಗಿ ರೂಪಗೊಳ್ಳುವುದು ಇಂತಹ ಸಂದರ್ಭಗಳಲ್ಲಿಯೇ. ಇಂದು ಕೂಡ ಭಾರತ ದೇಶಕ್ಕೆ ಮುಕ್ತಿಯಿಲ್ಲ. ಅಂದು ಬ್ರಿಟಿಷ್ ಆಕ್ರಮಣದಿಂದ ಭಾರತಾಂಬೆಯನ್ನು ಬಿಡುಗಡೆಗೊಳಿಸಿದ್ದರೂ ಇಂದಿಗೂ ಪಾಕಿಸ್ತಾನಿ ಉಗ್ರರಿಂದ ನಮ್ಮ ಗಡಿಭಾಗಗಳನ್ನು ರಕ್ಷಿಸಲು ಹರಸಾಹಸ ಪಡಬೇಕಾಗಿದೆ. ಕುವೆಂಪುರವರ 'ಭರತ ಮಾತೆ' (೧೯೩೧) ಕವಿತೆಯಲ್ಲಿನ ಈ ಸಾಲುಗಳು ಇಂತಿವೆ.
ತಲೆಯ ಹೊರೆಯ ಇಳಿಯಲಿಲ್ಲ;

ಎದೆಯ ಬೇನೆ ಅಳಿಯಲಿಲ್ಲ;
ಅಡಿಯ ಬೇಡಿ ಒಡೆಯಲಿಲ್ಲ;
ದುಡಿವ ದಾಸ್ಯ ಬಿಡಲೆ ಇಲ್ಲ;
ಎಂಥ ಮುಕ್ತಿಯೋ? ಇದು
ಎಂಥ ಮುಕ್ತಿಯೋ?

ಪಾಕಿಸ್ತಾನಿ ಉಗ್ರರ ಅಟ್ಟಹಾಸ ಎಲ್ಲೆ ಮೀರಿದೆ. ಗಡಿಭಾಗದಲ್ಲಿ ನಡೆಯುವ ಅವರ ಪೈಶಾಚಿಕ ಕೃತ್ಯಗಳು ಇಡೀ ದೇಶವನ್ನೇ ಆಕ್ರಮಿಸಬಹುದೆಂಬ ಆತಂಕ ದೂರ ಉಳಿದಿಲ್ಲ. ಇಂತಹ ಪೈಶಾಚಿಕ ಮನಸ್ಸುಗಳ ವಿರುದ್ಧ ಹೋರಾಡಿ ಮತ್ತೆ ಮತ್ತೆ ಭಾರತಾಂಬೆಯನ್ನು ಉಳಿಸಿಕೊಳ್ಳಬೇಕಾಗಿದೆ. ಪ್ರತಿಯೊಬ್ಬರಲ್ಲೂ ಭಾರತದ ಬಗ್ಗೆ ಅಭಿಮಾನ ತಲೆಯೆತ್ತಬೇಕಾಗಿದೆ. ಕದನವಿರಾಮವನ್ನು ಉಲ್ಲಂಘಿಸಿ ಪದೇ ಪದೇ ಕಾಲ್ಕೆರೆದುಕೊಂಡು ಬರುವ ಇಂತಹ ಪಾಕಿಸ್ತಾನಿ ಉಗ್ರರಿಂದ ನಮ್ಮ ಭಾರತಾಂಬೆಯನ್ನು ರಕ್ಷಿಸುವ ಗುರುತರ ಹೊಣೆ ನಮ್ಮದಾಗಿದೆ.

**ಅನುಬಂಧ**


೧) ಕುವೆಂಪು ಸಮಗ್ರ ಕಾವ್ಯ ಸಂ.೧-೨೦೦೦ ಕ.ಪ್ರಿ.ವಿ, ಹಂಪಿ
೨) ಕುವೆಂಪು ಸಮಗ್ರ ಕಾವ್ಯ ಸಂ:೨-೨೦೦೦ ಕವಿವಿ, ಹಂಪಿ
೩) ಕುವೆಂಪು ಕಾವ್ಯ (ಸಂಸ್ಕೃತಿ, ಚರಿತ್ರೆಯ ರೂಪಕ) ನರಹಳ್ಳಿ ಬಾಲಸುಬ್ರಹ್ಮಣ್ಯ: ೨೦೦೮ ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು,
೪) ಕುವೆಂಪು ಅವರ ಭಾವಗೀತೆಗಳು, ಪ್ರೇಮಾಸಿರ್ಸೆ, ೨೦೧೦ ಆನಂದ ಪ್ರಕಾಶನ: ಬೀದರ್.